## ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್

## ಸಿ.ಸಿ ನಂ.761/2024

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ವೀರಭದ್ರಗೌಡ ಮತ್ತೊಳ್ಳಿ | ಡಿಡಬ್ಲ್ಯೂ | 2 |
| ತಂದೆ:ಗಂಡನ ಹೆಸರು | : | ರುದ್ರಗೌಡ | | |
| ವಯಸ್ಸು | : | 59 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಸಂತೊಳ್ಳಿ ತಾ:ಶಿರಸಿ | | |

**ದಿನಾಂಕ: 25.01.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಎಂ ಎಸ್ ಹೆಚ್ ವಕೀಲರಿಂದ**

ಆರೋಪಿ ನನ್ನ ಹೆಂಡತಿ. ದೂರುದಾರರು ಗೊತ್ತು. ಆರೋಪಿ ಚಿನ್ನದ ವ್ಯಾಪಾರ ಮಾಡುತ್ತಿದ್ದು ನನ್ನ ಮಗನ ಮದುವೆಗೆ ಸಂಬಂಧಪಟ್ಟಂತೆ ಚಿನ್ನ ಖರೀದಿಸಲು ದೂರುದಾರರ ಬಳಿ ದಿನಾಂಕ 20.03.2020 ರಂದು ಹೋಗಿದ್ದೇವು. ಆಗ ಒಂದು ತಾಳಿ ಚೈನ್, ಮತ್ತೊಂದು ಚೈನ. ಮತ್ತು ಎರಡು ಜೊತೆ ಬೆಂಡೋಲೆಗಳನ್ನು ಖರೀದಿದೇನು. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ಸೊಸೆ ದೂರುದಾರರ ಅಂಗಡಿಗೆ ಹೋಗಿದ್ದೇವು. ಆ ಒಡವೆಗಳ ಒಟ್ಟು ರೂ. 4 ಲಕ್ಷ ಆಗಿತ್ತು. ಆ ಸಂದರ್ಭದಲ್ಲಿ ಆ ಒಡವೆಗಳ ಬಾಬ್ತು ರೂ. 2 ಲಕ್ಷ ದ 90 ಸಾವಿರಗಳನ್ನು ದೂರುದಾರರಿಗೆ ನೀಡಿದೇನು. ಅದೇ ರೀತಿ ನಮ್ಮ ಬಳಿ ಇದ್ದ ಹಳೆಯ ಬಂಗಾರದ ಒಡವೆಗಳನ್ನು ದೂರುದಾರರಿಗೆ ಕೊಟ್ಟೆವು. ನನ್ನ ಮಗನ ಮದುವೆ ನೆವಂಬರ 2020 ನೇ ಇಸವಿಯಂದು ನಡೆಯಿತು. ನಾನು ದೂರುದಾರರಿಗೆ ಇನ್ನೂ ಬಾಕಿ ರೂ. 1 ಲಕ್ಷದ 30 ಸಾವಿರ ಹಣ ಕೊಡಬೇಕಾಗಿದ್ದು, ಅದಕ್ಕೆ ನನ್ನಿಂದ 2 ಚೆಕ್ಕಗಳನ್ನು ಪಡೆದುಕೊಂಡಿದ್ದರು. ಆ ಚೆಕ್ ನಂಬರ 04 ಮತ್ತು 05 ಆಗಿರುತ್ತದೆ.ಆ ಚೆಕ್ಕುಗಳು ನನ್ನ ಹೆಂಡತಿ ಆರೋಪಿಗೆ ಸಂಬಂಧಿಸಿದ ಚೆಕ್ ಗಳು ಆಗಿರುತ್ತವೆ. ಆ ಚೆಕ್ ಗಳನ್ನು ದೂರುದಾರರಿಗೆ ಕೊಡುವ ವಿಚಾರ ಆರೋಪಿಗೆ ಗೊತ್ತಿರಲಿಲ್ಲ. ಆದರೆ ಬೇರೆ ವ್ಯವಹಾರಕ್ಕೆ ಕೊಡುತ್ತೇನೆ ಎಂದು ತಿಳಿಸಿದ್ದೇನು. ಆರೋಪಿ ಎಂದೂ ಸಹ ದುರುದಾರರ ಅಂಗಡಿಗೆ

ಪ್ರತ್ಯೇಕವಾಗಿ ಹೋಗಿ ಬಂಗಾರದ ಒಡವೆಗಳನ್ನು ಮಾಡಿಸಿರುವುದಿಲ್ಲ. ಆರೋಪಿ ಎಂದೂ ಸಹ ದೂರುದಾರರ ಅಂಗಡಿಗೆ ಹೋಗಿ ಬಂಗಾರವನ್ನು ಖರೀದಿಸಿರುವುದಿಲ್ಲ. ನನ್ನ ಮಗನ ಮದುವೆಯಾದ ನಂತರ 1 ತಿಂಗಳ ನಂತರ ಬಾಕಿ ಉಳಿದ ರೂ. 1 ಲಕ್ಷದ 30 ಸಾವಿರಗಳನ್ನು ದೂರುದಾರರಿಗೆ ವಾಪಸ್ಸು ಕೊಟ್ಟಿರುತ್ತೇನೆ. ನಾನು ಆ ಹಣ ಕೊಟ್ಟ ನಂತರ ಚಿನ್ನ ಖರೀದಿಸುವ ಸಂರ್ಭದಲ್ಲಿ ನೀಡಿದ ಆರೋಪಿ ಸಂಬಂಧಪಟ್ಟ ಎರಡು ಚೆಕ್ ಗಳನ್ನು ವಾಪಸ್ಸು ಕೊಡುವಂತೆ ದೂರುದಾರರನ್ನು ಎರಡು ಬಾರಿ ಕೇಳಲಾಗಿ ಕೋರೋನಾ ಇದೆ ಮತ್ತು ನಾನು ಬ್ಯುಸಿ ಇದ್ದೇನೆ ಎಂದು ಹೇಳಿ ಆ ಚೆಕ್ ಗಳನ್ನು ವಾಪಸ್ಸು ನೀಡಿರುವುದಿಲ್ಲ. ಆತ ನನಗೆ ನಂಬಿಕಸ್ಥ ಇದ್ದ ಕಾರಣ ಆ ಚೆಕ್ ನ್ನು ಪುನಃ ಕೇಳಿರುವುದಿಲ್ಲ. ದೂರುದಾರರು ಆರೋಪಿ ವಿರುದ್ಧ ಆ ಬಂಗಾರದ ಒಡವೆ ಬಾಬ್ತು ರೂ. 1 ಲಕ್ಷ 98 ಸಾವಿರ ಹಣ ಬರಬೇಕಾಗಿದೆ ಎಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈಗ ತೋರುತ್ತಿರುವ ದಾಖಲೆಯು ನಾನು ಬಂಗಾರ ಖರೀದಿಸಿದ ಬಗ್ಗೆ ದೂರುದಾರರು ನನಗೆ ನೀಡಿದ ಬಿಲ್ ಆಗಿರುತ್ತದೆ ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ನಿಡಿ-6 ರಲ್ಲಿ ಬರೆಯಲಾದ ಬರವಣಿಗೆ ದೂರುದಾರರೆ ನನಗೆ ಬರೆದುಕೊಟ್ಟ ದಾಖಲೆಗಳು ಆಗಿದ್ದು ಅವುಗಳು ದೂರುದಾರರ ಬರವಣಿಗೆ ಆಗಿರುತ್ತದೆ. ಅದರಲ್ಲಿರುವ ಕಿರು ಸಹಿ ದೂರುದಾರದಾಗಿರುತ್ತದೆ. ಅದೇ ರೀತಿ ಚೆಕ್ ನಂಬರ ಸಹ ದೂರುದಾರರು ಬರೆದು ಸಹಿ ಮಾಡಿ ಕೊಟ್ಟಿರುತ್ತಾರೆ. ಅದೇ ರೀತಿ ನಿಡಿ-2 ರಲ್ಲಿ ಬರೆಯಲಾದ ಬರವಣಗೆ ದಾರುದಾರದ್ದಾಗಿರುತ್ತದೆ. ಅದೇ ರೀತಿ ನಿಡಿ-2 ರ 2 ನೇ ಪುಟದಲ್ಲಿರುವ ಚೆಕ್ ನಂಬರ ಮತ್ತು ಕಿರು ಸಹಿ ದೂರುದಾರರೆ ಬರೆದುಕೊಟ್ಟಿರುತ್ತಾರೆ.

**:ಪಾಟೀ ಸವಾಲು: ದೂರುದಾರರ ಪರ ಶ್ರೀ.ಎಸ್ ಹೆಚ್ ಎಸ್ ವಕೀಲರಿಂದ:**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್